ಎಸ್‌ಐಆರ್ ಬಗ್ಗೆ ಕಾಂಗ್ರೆಸ್‌ಗೆ ಭೀತಿ ಏಕೆ: ಸಿ.ಟಿ.ರವಿ ಪ್ರಶ್ನೆ

ವಿವಿ ನೆಟ್‌ವರ್ಕ್– ಬೆಂಗಳೂರು: ಕಾಂಗ್ರೆಸ್‌ಗೆ ಮತಪಟ್ಟಿ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಬಗ್ಗೆ ಭೀತಿ ಏಕೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಪ್ರಶ್ನಿಸಿದ್ದಾರೆ.

ನಗರದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್‌ಐಆರ್ ಸಂಬಂಧ ಕಾಂಗ್ರೆಸ್ ದುರುದ್ದೇಶದ ಆರೋಪ ಮಾಡುತ್ತಿದೆ. ಎಸ್‌ಐಆರ್ ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರಂಭವಾಗಿದ್ದಲ್ಲ. ದೇಶದಲ್ಲಿ ಈಗಾಗಲೇ ಹನ್ನೆರಡು ಬಾರಿ ಈ ಪ್ರಕ್ರಿಯೆ ಆಗಿದೆ. ಇಷಾ?ಟದರೂ ಅವರಿಗೆ ಭೀತಿ ಏಕೆ ಎಂದು ಕೇಳಿದರು.

ಸಂವಿಧಾನ ನಿಯಮಗಳ ಅನ್ವಯ ಕಾನೂನುಬದ್ಧವಾಗಿ ಎಸ್‌ಐಆರ್ ನಡೆಯುತ್ತಿದೆ. ಮೃತಪಟ್ಟವರು, ಸ್ಥಳಾಂತರಗೊಂಡವರು, ಎರಡು ಕಡೆ ಮತವಿದ್ದವರು– ಹೀಗೆ ವಿವಿಧ ಕಾರಣಗಳನ್ನು ನೀಡಿ ಮತಪಟ್ಟಿಯಲ್ಲಿ ಹೆಸರು ತೆಗೆಯಲಾಗುತ್ತದೆ. ಇಂತಹ ಸಂವಿಧಾನಬದ್ಧ ಕ್ರಿಯೆಯನ್ನೇ ಕಾಂಗ್ರೆಸ್ ಪ್ರಶ್ನಿಸುತ್ತಿದೆ ಎಂದು ದೂರಿದರು.

ನೆಹರು, ಇಂದಿರಾ ಗಾಂಧಿ ಹಾಗೂ ಸೋನಿಯಾ ಅವರ ಕಾಲದಲ್ಲಿ ಎಸ್‌ಐಆರ್ ನಡೆದರೆ ಓಕೆ. ಆದ–'ರೆ ಬಿಜೆಪಿ ಅಧಿಕಾರದಲ್ಲಿರುವಾಗ ನಡೆದರೆ ಸರಿಯಲ್ಲ ಎಂದು ಕಾಂಗ್ರೆಸ್ ಹೇಳುತ್ತಿದೆ ಎಂದು ದೂರಿದರು. ಬೆಂಗಳೂರಿನ ನಗರಪಾಲಿಕೆಗಳಲ್ಲಿ ನೂರಾರು ಬಾಂಗ್ಲಾದೇಶದವರು ಕೆಲಸ ಮಾಡುತ್ತಿದ್ದಾರೆ ಎಂದು ಬಯಲಾದರೂ ರಾಜ್ಯದ ಕಾಂಗ್ರೆಸ್ ಸರ್ಕಾರ ವಿಶೇಷ ತನಿಖಾ ತಂಡ ಏಕೆ ಮಾಡಿಲ್ಲ ಎಂದು ಪ್ರಶ್ನಿಸಿದರು.

ಆಪಾದನೆ ಕಡಿಮೆ ಮಾಡಲು ಸಿಎಂ ಷಡ್ಯಂತ್ರ ...

ಬೆಂಗಳೂರು ಸೇರಿದಂತೆ ಹಲವಾರು ನಗರಗಳಲ್ಲಿ ಲಕ್ಷಾಂತರ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳ ಕಾಫಿ ತೋಟಗಳಲ್ಲಿ ಸಾವಿರಾರು ಅಕ್ರಮ ವಲಸಿಗರು ಇದ್ದಾರೆ. ಇವರೆಲ್ಲ ಭಾರತೀಯರಿಗೆ ಸಿಗಬೇಕಾದ ಉದ್ಯೋಗ ಕಸಿಯುತ್ತಿದ್ದಾರೆ. ಇವರನ್ನು ಮತಪಟ್ಟಿಗೆ ಸೇರಿಸುವ ಹುನ್ನಾರ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಕೆಲಸ. ಬರಗಾಲದಂತಹ ವಿಷಯಗಳನ್ನು ಮರೆ ಮಾಚಲು ಸಿಎಂ ಚುನಾವಣಾ ಆಯೋಗದ ಕಚೇರಿಯಲ್ಲಿ ಧರಣಿ ಮಾಡುತ್ತಾರೆ. ತಮ್ಮ ಮೇಲಿನ ಆಪಾದನೆ ಕಡಿಮೆ ಮಾಡಲು ಇಂತಹ ಷಡ್ಯಂತ್ರ



ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಎಸ್‌ಐಆರ್ ಅನ್ನು ಜಾರಿ ನಿರ್ದೇಶನಾಲಯ, ಸಿಬಿಐ ಮುಂತಾದ ಸಂಸ್ಥೆಗಳು ಮಾಡುವುದಿಲ್ಲ. ರಾಜ್ಯ ಸರ್ಕಾರ ಕಂದಾಯ, ಶಿಕ್ಷಣ ಮುಂತಾದ ಇಲಾಖೆಗಳ ನೌಕರರೇ ಮಾಡುವುದು. ಶೇ 99 ರಷ್ಟು ಕೆಲಸವನ್ನು ರಾಜ್ಯ ಸರ್ಕಾರದ ಅಧೀನದ ಇಲಾಖೆಗಳ ಅಧಿಕಾ–ರಿಗಳೇ ಮಾಡುವುದು. ಆದರೆ ಆಪಾದನೆ ಮಾಡುವುದು ಕೇಂದ್ರ ಸರ್ಕಾರದ ಮೇಲೆ. ಏನೇ ತಪ್ಪಾಗಿದ್ದರೆ ರಾಜ್ಯ ಸರ್ಕಾರವೇ ಹೊಣೆ. ಬಾಂಗ್ಲಾದೇಶಿ ಸೇರಿದ್ದರೆ ಪ್ರಶ್ನಿಸುವುದು ನಮ್ಮ ಹಕ್ಕು. ಅವನು ನ್ಯಾಯ ಸಮ್ಮತ ಮತದಾರ ಎಂದು ರಾಜ್ಯ ಸರ್ಕಾರವೇ ಸಾಬೀತು ಮಾಡಬೇಕು ಎಂದರು.

ಬಾಂಗ್ಲಾ ಮತದಾರರು ಕೈಬಿಡುವ ಭೀತಿ...

ಅಕ್ರಮ ನಡೆದರೆ ಸಾವಿರ ದೂರು ಕೊಡುತ್ತೇವೆ. ಆದರೆ ಇವರು ದೂರು ನೀಡಿದವರ ಮೇಲೆಯೇ ಎಫ್‌ಐಆರ್ ಹಾಕುತ್ತಾರೆ. ಸರಿಯಾದ ರೀತಿ ದೂರುಗಳ ಪರಿಶೀಲನೆ ನಡೆದರೆ ಬಾಂಗ್ಲಾದೇಶಿ ಮತದಾರರು ಕೈಬಿಟ್ಟು ಹೋಗುತ್ತಾರೆ ಎಂಬ ಭೀತಿ ಕಾಂಗ್ರೆಸ್ ಕಾಡುತ್ತಿದೆ.

ಬಿಜೆಪಿ ಸೋಲಿಸಲು ತಕ್ಷಣಕ್ಕೆ ಬಾಂಗ್ಲಾದವರು ಕಾಂಗ್ರೆಸ್ ಮತದಾರರು. ನಾಳೆ ಅವರು ಕಾಂಗ್ರೆಸ್ ಅನ್ನೂ ಸೋಲಿಸುತ್ತಾರೆ. ತಕ್ಷಣದ ರಾಜಕೀಯ ಲಾಭ ಪಡೆಯಲು ದೇಶಕ್ಕೆ, ಸಂವಿಧಾನಕ್ಕೆ ಅಪಚಾರ ಮಾಡುತ್ತಿದ್ದಾರೆ ಎಂದು ದೂರಿದರು.

ಅನುಮಾನಗಳನ್ನು ನಾವು ಪ್ರಶ್ನಿಸಿದ್ದೇವೆ...

ಮುಖ್ಯ ಚುನಾವಣಾ ಆಯಕ್ತರು ಆರೊ ಮತ್ತು ಎಆರೊಗಳಿಗೆ ಸೂಚನೆ ನೀಡಿ, ಎಲ್ಲವನ್ನು ಪರಿಶೀಲನೆ ಮಾಡಲಿ. ಫಾರಂ ನಂ 6 ಅನ್ನು ಸಲ್ಲಿಸಿ ಹೊಸ ಮತದಾರರನ್ನು ಸೇರಿಸುವುದನ್ನು ಯಾರಿಂದಲೂ ತಡೆಯಲು ಆಗಲ್ಲ. ಫಾರಂ 7 ಆಕ್ಷೇಪಣೆ ಸಲ್ಲಿಸಲು ಇದೆ. ಅನುಮಾನಾಸ್ಪದ ಮತದಾರರು ಕಂಡುಬಂದರೆ ಅವರನ್ನು ಕೈಬಿಡಬಹುದು. ಮತಪಟ್ಟಿಗೆ ಸೇ–ರಿದವರಲ್ಲಿ ಕೆಲವರ ವಯಸ್ಸಿನಲ್ಲಿ ಅನುಮಾನಗಳಿವೆ. ಇದನ್ನು ನಾವು ಆಕ್ಷೇಪಿಸಿದ್ದೇವೆ. ಇದನ್ನೆಲ್ಲ ಪರಿಶೀಲನೆ ಮಾಡಬೇಕಾಗಿದ್ದು ಅಧಿಕಾರಿಗಳ ಕರ್ತವ್ಯ ಎಂದು ತಿಳಿಸಿದರು. ಕಾಂಗ್ರೆಸ್ ಬೆದರಿಕೆ ಮಣಿಯದೆ ಎಸ್‌ಐಆರ್ ಪ್ರಕ್ರಿಯೆಯ ಅಧಿಕಾರಿಗಳು ಕೆಲಸ ಮಾಡಲಿ. ಇವಿಎಂ ಮೇಲೆ ಆರೋಪ ಮಾಡಿದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್ ಅವರು ಆರೋಪವನ್ನು ಸಾಬೀತು ಮಾಡಿಲ್ಲ.

ಅವರ ಮೇಲೆ ಸುಳ್ಳು ಆಪಾದನೆ ಮೇಲೆ ಪ್ರಕರಣ ದಾಖಲಿಸಬಹುದು. ಇವರ ಮೇಲೆ ಎಫ್‌ಐಆರ್ ದಾಖಲಿಸಬಹುದು. ಇವರು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ ತಂದಿದ್ದಾರೆ. ಇವಿಎಂ ಅನ್ನು ಹ್ಯಾಕ್ ಮಾಡಬಹುದು ಎಂಬುದನ್ನು ನ್ಯಾಯಾಲಯದ ಮುಂದೆ ತೋರಿಸಲಿ.

ಇವಿಎಂ ಹ್ಯಾಕ್ ಆಗುವುದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ. ಕೇರಳ, ತೆಲಂಗಾಣದಲ್ಲಿ, ಹಿಮಾಚಲಪ್ರದೇಶದಲ್ಲಿ ಅಧಿಕಾರಕ್ಕೆ ಬತರುತ್ತಿರಲಿಲ್ಲ ಎಂದು ವಿವರಿಸಿದರು.

ಡಿಕೆಶಿ ಸಾರ್ವಜನಿಕ ಕ್ಷಮೆಯಾಚಿಸಲಿ...

ಇವಿಎಂ ಹ್ಯಾಕ್ ಮಾಡಿದ್ದರೆ ರಾಹುಲ್ ಗಾಂಧಿ, ಪ್ರಿಯಾಂಕ್ ಖರ್ಗೆ, ಮಲ್ಲಿಕಾರ್ಜುನ ಖರ್ಗೆ ಅಳಿಯ ಗೆಲ್ಲುತ್ತಲೇ ಇರಲಿಲ್ಲ. ಡಿಕೆಶಿ ಮುಖ್ಯಮಂತ್ರಿಯಾಗುತ್ತಿರಲಿಲ್ಲ. ಇವಿಎಂ ಮೇಲೆ ಸುಳ್ಳು ಆಪಾದನೆ ಮಾಡಿದ ಇವರೆಲ್ಲ ಸಾರ್ವಜನಿಕ ಕ್ಷಮೆ ಯಾಚಿಸಲಿ. ತಾನು ಕಳ್ಳ ಪರರ ನಂಬ ಎಂಬಂತೆ ಬಿಜೆಪಿ ಮೇಲೆ ಆರೋಪ ಹೊರಿಸುತ್ತಿದ್ದಾರೆ. ಅಲ್ಲದ ಸಾಂವಿಧಾನಿಕ ಸಂಸ್ಥೆಗಳನ್ನು ಅನುಮಾನದಿಂದ ನೋಡುವ ರೀತಿ ಮಾಡುತ್ತಿದ್ದಾರೆ. ಇದು ಸಂವಿಧಾನಕ್ಕೆ ಮಾಡಿದ ದ್ರೋಹ ಎಂದು ಹೇಳಿದರು. ಬಿಎಲ್‌ಒಗಳ ಆಕ್ಷೇಪಣೆಗಳನ್ನು ಆಯೋಗ ಸರಿಯಾಗಿ ಪರಿಶೀಲಿಸಲಿ. ಬಾಂಗ್ಲಾದವರ ವಿರುದ್ಧ ವಿಶೇಷ ತನಿಖೆಯನ್ನು ಸರ್ಕಾರ ನಡೆಸಲಿ. ಆಂತರಿಕ ಭದ್ರತೆ ಜೊತೆ ಸರ್ಕಾರ ಆಟ ಆಡದಿರಲಿ. ಸಿಎಂ ಬೆದರಿಕೆ ತಂತ್ರ ಅನುಸ–ರಿಸುವುದು ಬೇಡ. ಅಕ್ರಮ ಮತದಾರರನ್ನು ಉಳಿಸಲು ಎಲ್ಲ ಸಂಚು ಮಾಡುತ್ತಿದ್ದಾರೆ ಎಂದರು.

ಒಂದು ದಿನಕ್ಕೆ ಎಷ್ಟು ಆಕ್ಷೇಪಣೆ ಸಲ್ಲಿಬಹುದೋ ಅಷ್ಟನ್ನೇ ಬಿಎಲ್ಎ ಸಲ್ಲಿಸಿದ್ದಾರೆ. ನೂರಾರು ಆಕ್ಷೇಪಣೆ ಸಲ್ಲಿಸಿದ್ದಾರೆ ಎಂಬ ಕಾಂಗ್ರೆಸ್ ಆರೋಪ ಸುಳ್ಳು. ಆಕ್ಷೇಪಣೆ ಸಲ್ಲಿಸಿದಾಗ ಹೆಸರು ತೆಗೆಯಲ್ಲ. ಎಲ್ಲವನ್ನೂ ಪರಿಶೀಲನೆ ಮಾಡುವವರು ಬಿಎಲ್‌ಒಗಳು. ಸತ್ಯಾಸತ್ಯತೆಯ ಪರಿಶೀಲನೆ ಮಾಡಲಿ ಎಂದು ಪ್ರಶ್ನೆಗೆ ಉತ್ತರಿಸಿದರು. ಮಸೀದಿಗಳಲ್ಲಿ, ಕಲ್ಯಾಣ ಮಂಟಪಗಳಲ್ಲಿ ನೂರಾರು ಜನರನ್ನು ಸೇರಿಸಿ ಎನ್ಯೂಮರೇಷನ್ ಫಾರಂ ಕೊಡುವಾಗ ಇವರಿಗೆ ಕಾನೂನಿನ ನೆನಪಾಗಲಿಲ್ಲ. ಆಗ ಮೌನವಾಗಿದ್ದರು. ಅಕ್ರಮ ನಡೆಸಲು ಪಿಆರ್ಸಿ ಕೊಡಲು ಮುಂದಾಗಿದ್ದರು ಎಂದರು.

ಸಂಪುಟ ಸಭೆಯನ್ನೇ ಅಲಕ್ಷಿಸಿ ರಸ್ತೆಯಲ್ಲಿ ಕೂತು ನಡೆಸಿದ ಪ್ರಹಸನ

ಹಾಸ್ಯಾಸ್ಪದ, ದೆಹಲಿ ಅಪ್ಪಣೆಯಂತೆ ಕುಣಿಯುತ್ತಿದ್ದಾರೆ: ಹೆಚ್.ಡಿ.ಕುಮಾರಸ್ವಾಮಿ

ವಿವಿ ನೆಟ್‌ವರ್ಕ್– ಬೆಂಗಳೂರು: ಮತಗಳ್ಳತನ ವಿರುದ್ಧ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಕಚೇರಿ ಮುಂದೆ ಸಿಎಂ ಆದಿಯಾಗಿ ಸಂಪುಟ ಸಚಿವರು ಧರಣಿ ನಡೆಸುತ್ತಿರುವುದರ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜೆ.ಪಿ.ನಗರ ನಿವಾಸದ ಬಳಿ ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ಎಸ್‌ಐಆರ್ ಶುರುವಾದಾಗ ನಿರಂತರ ಅಕ್ರಮಗಳನ್ನು ಎಸಗಿದ ಕಾಂಗ್ರೆಸ್ ಪಕ್ಷವೇ ಈಗ ಅದರ ವಿರುದ್ಧ ಮಾತನಾಡುತ್ತಿರುವುದು ನಾಚಿಕೆಗೇಡು. ಅಲ್ಲದೇ



ಮುಖ್ಯಮಂತ್ರಿ ಮತ್ತು ಅವರ ಸಂಪುಟ ಸದಸ್ಯರು ಸಂಪುಟ ಸಭೆಯನ್ನೇ ಅಲಕ್ಷಿಸಿ ರಸ್ತೆಯಲ್ಲಿ ಕೂತು ನಡೆಸಿದ ಪ್ರಹಸನ ಹಾಸ್ಯಾಸ್ಪದ ಎಂದು ಕೇಂದ್ರ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಲೇವಡಿ ಮಾಡಿದರು.

ವೋಟ್ ಚೋರಿ ಆಗಿದೆ ಎಂದು ಕಾಂಗ್ರೆಸ್ ಅನಗತ್ಯವಾಗಿ ರಂಪ ಮಾಡುತ್ತಿರುವುದು ತಮಾಷೆಯಾಗಿದೆ. ಇದು ಹೇಗಿದೆ ಎಂದರೆ ಭೂತದ ಬಾಯಲ್ಲಿ ಭಗವದ್ಗೀತೆ ಬಂದ ಹಾಗಿದೆ. ಎಸ್‌ಐಆರ್ ಪ್ರಕ್ರಿಯೆ ಶುರುವಾದ ಸಂದರ್ಭದಲ್ಲಿ ಇದೇ ಕಾಂಗ್ರೆಸ್ ನಾಯಕರು ಕಲ್ಯಾಣ ಮಂಟಪಗಳು, ಸಮುದಾಯ ಭವನಗಳು, ಮನೆಗಳು ಸೇರಿದಂತೆ ನಾನಾ ಕಡೆ ಜನರನ್ನು ಗುಂಪು ಗುಂಪಾಗಿ ಸೇರಿಸಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಿದ್ದನ್ನು ನೋಡಿದ್ದೇವೆ. ಅದರ ವಿರುದ್ಧ ನಮ್ಮ ಪಕ್ಷದ ವತಿಯಿಂದ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ. ಆಮೇಲೆ ಎನ್‌ಡಿಎ ಮೈತ್ರಿಕೂಟದ ನಾಯಕರೆಲ್ಲರೂ ಹೋಗಿ ದೂರು ನೀಡಿದ್ದೇವೆ. ಆದರೂ ಯಾರ ಮೇಲೆಯೂ ಪ್ರಕರಣ ದಾಖಲಾಗಲಿಲ್ಲ. ಆದರೂ ಇವತ್ತು ಅಕ್ರಮ ಎಸಗಿದ ಕಾಂಗ್ರೆಸ್ ಪಕ್ಷದವರೇ ಬಂದು ಅಕ್ರಮ ಅಕ್ರಮ ಎಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ದೂರಿದರು.

ನಾವು ದೂರು ಕೊಟ್ಟಾಗ ಮೌನಕ್ಕೆ ಶರಣಾಗಿದ್ದ ಸರ್ಕಾರ, ಎಸ್‌ಐಆರ್ ನಲ್ಲಿ ದೋಷ ಇಲ್ಲ ಎಂದು ಸುಮ್ಮನೆ ಇದ್ದವರು ಈಗ ಏಕೆ ಎದ್ದು ಕೂತಿದ್ದೀರಿ ನಿಮ್ಮ ದೆಹಲಿ ನಾಯಕರು ಬಿಸಿ ಮುಟ್ಟಿಸಿದ ಮೇಲೆ ನೀವು ಈ ಪ್ರಹಸನ ಆರಂಭ ಮಾಡಿದ್ದೀರಿ. ಈಗ ಬಂದು ನಾಟಕ ಶುರು ಮಾಡಿದ್ದೀರಿ. ಮಾಧ್ಯಮಗೋಷ್ಠಿಯನ್ನು ನಡೆಸಿ, ನೈಸ್ ಕಂಪನಿ ಜತೆ ಶಾಮೀಲಾಗಿ ಮುಖ್ಯಮಂತ್ರಿ ಮತ್ತು ಅವರ ಕುಟುಂಬ ಸದಸ್ಯರು ಯೋಜನೆಯ ಭೂಮಿಯನ್ನು ಲಪಟಾಯಿಸುವ ಬಗ್ಗೆ ದಾಖಲೆಗಳ ಸಮೇತ ಬಹಿರಂಗ ಮಾಡಿದ್ದೆ.

ಆ ವಿಷಯು ರಾಜಕೀಯವಾಗಿ ಮತ್ತು ಸಾರ್ವಜನಿಕವಾಗಿ ತೀವ್ರ ಚರ್ಚೆಗೆ ಒಳಗಾಗುತ್ತಿರುವ ಸಂದರ್ಭದಲ್ಲಿ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಎಸ್‌ಐಆರ್ ವಿಷಯವನ್ನು ಮುನ್ನೆಲೆಗೆ ತಂದಿದ್ದಾರೆ ಎಂದು ಸಚಿವ ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದರು.

ನೈಸ್ ಯೋಜನೆಯನ್ನು ತೆಗೆದುಕೊಳ್ಳಬೇಕಾದರೆ ಈ ಸರ್ಕಾರದ ಬಳಿ ಹಣಕ್ಕೆ ಗತಿಯಿಲ್ಲ. ಏನಾದ್ರೂ ಆದರೆ ಇವರು ವಿಧಾನಸೌಧ ಮತ್ತು ವಿಕಾಸ ಸೌಧವನ್ನು ನನಗೆ ಬರೆದು ಕೊಡಬೇಕು. ಕೊನೆ ಪಕ್ಷ ಎರಡು ಲಕ್ಷ ಕೋಟಿ ಹಣವನ್ನು ನನಗೆ ಕೊಡಬೇಕಾಗುತ್ತದೆ. ಗ್ಯಾರಂಟಿಗಳಿಂದ ಖಜಾನೆ ಖಾಲಿಯಾಗಿದ್ದು ನನಗೆ ಕೊಡಲು ಸರ್ಕಾರದ ಬಳಿ ಹಣ ಎಲ್ಲಿದೆ ಎಂದು ನೈಸ್ ಗುತ್ತಿಗೆದಾರ ಕೊಟ್ಟಿರುವ ಹೇಳಿಕೆಯನ್ನು ನಾನು ಗಮನಿಸಿದ್ದೇನೆ. ಅಂತವನಿಗೆ ಈ ಮುಖ್ಯಮಂತ್ರಿ ರಕ್ಷಣೆ ಕೊಟ್ಟುಕೊಂಡು ಬರುತ್ತಿದ್ದಾರೆ. ಅದನ್ನು ನಾನು ಪ್ರಶ್ನಿಸಿದರೆ ಈಗ ಈ ಮನುಷ್ಯ ಎಸ್‌ಐಆರ್ ನಾಟಕ ಶುರು ಮಾಡ್ಕೊಂಡಿದ್ದಾರೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಮುಖ್ಯಮಂತ್ರಿ ಸಂಪುಟ ಸಭೆ ಬಿಟ್ಟು ರಸ್ತೆಯ ಮುಂದೆ ಅದು ಹೇಗೆ ಪ್ರತಿಭಟನೆ ನಡೆಸಲು ಸಾಧ್ಯ ನಾವು ಪ್ರತಿಭಟನೆ ಮಾಡಲು ಹೋದರೆ ನ್ಯಾಯಾಲಯದ ಆದೇಶವಿದೆ ಅವಕಾಶ ನೀಡುವುದಿಲ್ಲ ಎಂದು ಹೇಳುವ ಪೊಲೀಸರು, ಈ ಮುಖ್ಯಮಂತ್ರಿಗೆ ಪ್ರತಿಭಟನೆ ನಡೆಸಲು ಪೊಲೀಸರು ಹೇಗೆ ಅವಕಾಶ ಕೊಟ್ಟರು ಇದು ನ್ಯಾಯಾಂಗ ಉಲ್ಲಂಘನೆ ಆಗುವುದಿಲ್ಲವೇ ಎಂದು ಸಚಿವರು ಪ್ರಶ್ನಿಸಿದರು.

ಇವರು ಸ್ವಂತ ಮೆದುಳಿನಿಂದ ಆಡಳಿತ ನಡೆಸುತ್ತಿಲ್ಲ. ದೆಹಲಿಗೆ ಹೋಗಿ ಅವರ ಅಧಿನಾಯಕರಿಂದ ಅಪ್ಪಣೆ ಮತ್ತು ಅನುಮತಿ ಪಡೆದು ಬಂದಿದ್ದಾರೆ. ಅವರಲ್ಲಿ ಕೈ ತೋರಿಸಿದರೆ ಇಲ್ಲಿ ಬಂದು ಕುಣಿಯುತ್ತಾರೆ. ಇವರಿಗೆ ಯಾವುದೇ ರೀತಿಯ ಸ್ವಂತಿಕೆ ಇಲ್ಲ ಎಂದು ತರಾಟೆಗೆ ತೆಗೆದುಕೊಂಡ ಕುಮಾರಸ್ವಾಮಿ ಅವರು, ಮತದಾರರ ಪಟ್ಟಿಯಲ್ಲಿ ಅಹಿಂದ ಮತದಾರರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳುವ ಈ ಮುಖ್ಯಮಂತ್ರಿ ತಮ್ಮ ಸಂಪುಟದಿಂದ ಅಹಿಂದ ಸಚಿವರನ್ನು ನಿರ್ನಾಮ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅಲ್ಪಸಂಖ್ಯಾತ ಮತದಾರರನ್ನು ಡಿಲೀಟ್ ಮಾಡಿಸಲು ಯತ್ನ ಆರೋಪ:

ಬಿಜೆಪಿ ಮುಖಂಡ ರವಿ ಪಾಟೀಲ ಸೇರಿ 25 ಜನರ ವಿರುದ್ಧ ಕೇಸ್ ದಾಖಲು..!

ವಿವಿ ನೆಟ್‌ವರ್ಕ್– ಬೆಳಗಾವಿ: ಎಸ್‌ಐಆರ್ ವಿಚಾರ ದೇಶ, ರಾಜ್ಯದಲ್ಲಿ ಆಡಳಿತ ಮತ್ತು ವಿಪಕ್ಷಗಳ ನಡುವಿನ ಕಿತ್ತಾಟಕ್ಕೆ ಕಾರಣವಾಗಿದೆ. ಬೆಳಗಾವಿಯಲ್ಲೂ ಒಬ್ಬರಿಗೊಬ್ಬರು ಆರೋಪ – ಪ್ರತ್ಯಾರೋಪದಲ್ಲಿ ತೊಡಗಿದ್ದು, ಇಲ್ಲಿನ ಹೊಸ ವೀರಭದ್ರ ನಗರದಲ್ಲಿನ ಕೆಲವು ಅಲ್ಪಸಂಖ್ಯಾತ ಮತದಾರರನ್ನು ಎಸ್‌ಐಆರ್‌ನಿಂದ ತೆಗೆದುಹಾಕುವಂತೆ ಫಾರ್ಮ್ ನಂಬರ್–7 ಕೊಟ್ಟ ಆರೋಪದ ಮೇಲೆ ಬಿಜೆಪಿ ಮುಖಂಡ ಡಾ. ರವಿ ಪಾಟೀಲ ಸೇರಿದಂತೆ ಮೂವರು ಹಾಗೂ ಅಪರಿಚಿತ 25 ಮಂದಿಯ ವಿರುದ್ಧ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಸ ವೀರಭದ್ರನಗರದ ನಿವಾಸಿ, ಆಟೊ ಚಾಲಕ ಮೀರಾಸಾಬ್ ಸನದಿ (52) ದೂರು ನೀಡಿದವರು.

ಶಂಕರ ಬೀರಪ್ಪ ನಾಯ್ಕು, ಪ್ರಶಾಂತ ದೀಪಕ ಮುಂದಿನಮನಿ ಹಾಗೂ ಡಾ. ರವಿ ಅವರನ್ನು ಎಫ್‌ಐಆರ್‌ನಲ್ಲಿ ಕ್ರಮವಾಗಿ ಮೊದಲ, ಎರಡನೇ ಮತ್ತು ಮೂರನೇ ಆರೋಪಿಗಳಾಗಿ ಉಲ್ಲೇಖಿಸಲಾಗಿದೆ.

ಡಾ. ರವಿ ಪಾಟೀಲ 2023ರ ವಿಧಾನಸಭೆ ಚುನಾವಣೆಯಲ್ಲಿ ಬೆಳಗಾವಿ ಉತ್ತರಕ್ಷೇತ್ರದ ಪರಾಜಿತ ಅಭ್ಯರ್ಥಿ. ಅಪರಿಚಿತ 20 ರಿಂದ 25 ಮಂದಿಯನ್ನೂ ಆರೋಪಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.

ಸೆ.22ರಂದು ಮಧ್ಯಾಹ್ನ 2.30ರ ಸುಮಾರಿಗೆ ಹೊಸ ವೀರಭದ್ರನಗರದ ಏಳನೇ ಅಡ್ಡರಸ್ತೆಯಲ್ಲಿ ಘಟನೆ ನಡೆದಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರುದಾರರು ಘಟನೆಯನ್ನು ಖುದ್ದು ಕಂಡಿರುವುದಾಗಿ ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ. ಲಿಖಿತ ದೂರಿನ ಆಧಾರದಲ್ಲಿ ಭಾರತೀಯ ನ್ಯಾಯ ಸಂಹಿತೆಯ ಕಲಂ 318(4), 336(3), 336(4), 353, 61(2), 3(5), 3(7), 192, 190 ಅಡಿ ಪ್ರಕರಣ ದಾಖಲಿಸಲಾಗಿದೆ.

198 ಮುಸ್ಲಿಂ ಮತದಾರರ ಗುರಿಯಾಗಿಸಿ ಡಿಲೀಟ್ ಮಾಡುವ ಒಳ ಸಂಚು ಮತ್ತು ನಕಲಿ ದಾಖಲಾತಿ, ಸುಳ್ಳು ಮಾಹಿತಿ ನೀಡಿದ ಆರೋಪ ಇವರ ವಿರುದ್ಧ ಕೇಳಿ ಬಂದಿದೆ.

ಸೆ.22ರಂದು ವೀರಭದ್ರನಗರದ ಮತಗಟ್ಟೆ



195,196ರಲ್ಲಿ ಜೀವಂತವಾಗಿರುವ ಹಾಗೂ ಕಾನೂನುಬದ್ಧ ಇರುವ ಮತದಾರರ ಹೆಸರು ಡಿಲೀಟ್ ಮಾಡಿಸಲು ಆರೋಪಿಗಳು ಯತ್ನಿಸಿದ್ದಾರೆ ಎನ್ನಲಾಗಿದ್ದು, ಈ ವೇಳೆ, ರವಿ ಪಾಟೀಲ್ ಸೇರಿ ಮೂವರನ್ನು ಸ್ಥಳೀಯರು ಹಿಡಿದಿದ್ದರು. ಫಾರ್ಮ್ ನಂ.7ರ ಮೂಲಕ ಡಿಲೀಟ್ ಮಾಡಿಸಲು ಯತ್ನ ಆರೋಪ ಸಂಬಂಧ ಘಟನೆ ನಡೆದು ಎಂಟು ದಿನಗಳ ಬಳಿಕ ಎಫ್‌ಐಆರ್ ದಾಖಲಾಗಿದೆ.

ಸಂಸದ ಜಗದೀಶ ಶೆಟ್ಟರ್ ಈ ಕುರಿತು ಪ್ರತಿಕ್ರಿಯಿಸಿದ್ದು, "ಎಸ್‌ಐಆರ್ ಪ್ರಕ್ರಿಯೆ ಮುಗಿದ ಮೇಲೆ ನಡೆದ ಚುನಾವಣೆಯಲ್ಲಿ ನೀವು ಗೆದ್ದು ಬಂದಿದ್ದೀರಿ ಎಂಬುದನ್ನು ರಾಜ್ಯ ಕಾಂಗ್ರೆಸ್ ಮರೆಯಬಾರದು. ಬಿಎಲ್ಎ 1, ಬಿಎಲ್ಎ 2 ಇರುವ ನಮ್ಮ ಬಿಜೆಪಿ ಕಾರ್ಯಕರ್ತರು ತಕರಾರು ಅರ್ಜಿ ಸಲ್ಲಿಸಿದರೆ ಅದೊಂದು ಅಪರಾಧದಂತೆ ನೋಡಲಾಗುತ್ತಿದೆ.

ಇಡೀ ರಾಜ್ಯದಲ್ಲಿ ಎಫ್‌ಐಆರ್ ದಾಖಲಿಸುವ ಕೆಲಸ ಆಗುತ್ತಿದೆ. ಬೆಳಗಾವಿಯಲ್ಲೂ ಡಾ. ರವಿ ಪಾಟೀಲ ಸೇರಿ ಮತ್ತಿತರ ಕಾರ್ಯಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಇದೊಂದು ರೀತಿ ಅಧಿಕಾರ ದುರ್ಬಳಕೆ, ರಾಜಕೀಯ ವಿರೋಧಿಗಳನ್ನು ಹತ್ತಿಕ್ಕುವ ಕೆಲಸ. ಅಭಯ್ ಪಾಟೀಲ ಅವರು ಕೂಡ ಅರ್ಜಿ ಸಲ್ಲಿಸಿ, ಪರಿಶೀಲನೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು.

ತಕರಾರರು ಅರ್ಜಿಯನ್ನೂ ಸಲ್ಲಿಸಬಾರದು ಎಂದರೆ ಅದು ಸರ್ವಾಧಿಕಾರಿ ಧೋರಣೆ ಆಗುತ್ತದೆ" ಎಂದು ಆರೋಪಿಸಿದರು.

"ನಮ್ಮ ಮುಖಂಡರು, ಕಾರ್ಯಕರ್ತರು ಕೊಟ್ಟಿರುವ ತಕರಾರನ್ನು ಪರಿಶೀಲನೆ ನಡೆಸಬೇಕು. ಅದರಲ್ಲಿ ಏನಾದರೂ ದೋಷ ಕಂಡು ಬಂದರೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆ.

ಅದನ್ನು ಬಿಟ್ಟು ತಕರಾರು ಅರ್ಜಿ ಕೊಟ್ಟವರ ವಿರುದ್ಧವೇ ಎಫ್‌ಐಆರ್ ದಾಖಲಿಸುವುದನ್ನು ಬಿಡಬೇಕು. ಈ ಸಂಬಂಧ ಯಾವ ರೀತಿ ಹೋರಾಟ ಮಾಡಬೇಕು ಎಂಬುದನ್ನು ರಾಜ್ಯ ಬಿಜೆಪಿ ನಾಯಕರು ಚರ್ಚಿಸಿ ನಿರ್ಧಾರ ಪ್ರಕಟಿಸುತ್ತೇವೆ" ಎಂದು ಜಗದೀಶ ಶೆಟ್ಟರ್ ಸ್ಪಷ್ಟಪಡಿಸಿದರು.

ಊಂಜಲ್ ಸಂಗೀತ ಕಾರ್ಯಕ್ರಮ



ವಿವಿ ನೆಟ್‌ವರ್ಕ್– ಬೆಂಗಳೂರು: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಯ್ಯಾಲಿಕಾವಲಿನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಕ್ಟೋಬರ್ 3, ಶನಿವಾರ ಸಂಜೆ 6–00ಕ್ಕೆ ಊಂಜಲ್ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದ್ದು ಕು॥ ಅವನಿ ಭಟ್ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್ ಮತ್ತು ತಬಲಾ ವಾದನದಲ್ಲಿ ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಸಹಕರಿಸಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ ಸಂಚಾಲಕರಾದ ಡಾ॥ ಪಿ. ಭುಜಂಗರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಿಮನೆ ಘಟ್ಟದಲ್ಲಿ ಕಂದಕಕ್ಕೆ ಉರುಳಿದ ಬಸ್: 12 ಮಂದಿಗೆ ಗಾಯ

ವಿವಿ ನೆಟ್‌ವರ್ಕ್– ಕಾರವಾರ: ಕುಮಟಾ ತಾಲೂಕಿನ ದೇವಿಮನೆ ಘಟ್ಟದ ಮಾಸ್ತಿಹಳ್ಳದ ಬಳಿ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಆಳವಾದ ಕಂದಕಕ್ಕೆ ಉರುಳಿಬಿದ್ದ ಪರಿಣಾಮ 12 ಮಂದಿ ಪ್ರಯಾಣಿಕರು ಗಾಯಗೊಂಡಿರುವ ಘಟನೆ ಗುರುವಾರ ರಾತ್ರಿ ನಡೆದಿದೆ. ಬಾಗಲಕೋಟೆಯಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಬಸ್ ಇದಾಗಿದ್ದು, ಅದೃಷ್ಟವಶಾತ್ ಭಾರಿ ಪ್ರಾಣಹಾನಿ ಸಂಭವಿಸಿಲ್ಲ.

ಬಾಗಲಕೋಟೆಯಿಂದ ಶಿರಸಿ ಮಾರ್ಗವಾಗಿ ದೇವಿಮನೆ ಘಟ್ಟದ



ಮೂಲಕ ಧರ್ಮಸ್ಥಳದತ್ತ ಬಸ್ ತೆರಳುತ್ತಿತ್ತು.

ಮಾಸ್ತಿಹಳ್ಳದ ಸಮೀಪದ ಕಡಿದಾದ ತಿರುವಿನಲ್ಲಿ ಸಾಗುತ್ತಿದ್ದ ವೇಳೆ ಏಕಾಏಕಿ ಚಾಲಕನ ನಿಯಂತ್ರಣ ತಪ್ಪಿದ ಬಸ್ ರಸ್ತೆ ಬದಿಯಿಂದ ಕೆಳಕ್ಕೆ ಉರುಳಿ ಕಂದಕಕ್ಕೆ ಬಿದ್ದಿದೆ.

ಅಪಘಾತದ ರಭಸಕ್ಕೆ ಬಸ್‌ನಲ್ಲಿದ್ದ 12 ಪ್ರಯಾಣಿಕರು ಗಾಯಗೊಂಡಿದ್ದಾರೆ. ಬಸ್ ಚಾಲಕ ಅಪಾಯದಿಂದ ಪಾರಾಗಿದ್ದಾರೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಕುಮಟಾ ಪೊಲೀಸ್ ಠಾಣೆಯ ಪಿಎಸ್‌ಐ ಖಾದರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಕಂದಕಕ್ಕೆ ಬಿದ್ದಿದ್ದ ಬಸ್‌ನಲ್ಲಿದ್ದ ಗಾಯಾಳುಗಳನ್ನು ಸ್ಥಳೀಯರ ನೆರವಿನೊಂದಿಗೆ ಪೊಲೀಸರು ತಕ್ಷಣ ರಕ್ಷಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಕುಮಟಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

Altum Credo Home Finance

ಅಲ್ಟಮ್ ಕ್ರೆಡೋ ಹೋಮ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್

ನೋಂ. ಕಚೇರಿ: ಮಹಡಿ ಸಂಖ್ಯೆ 7, ಕಲ್ಪತರು ಇನ್ಸಿನಿಯಾ, ಪ್ಲಾಟ್ ಸಂಖ್ಯೆ 22, ಸಬ್ ಪ್ಲಾಟ್ ಸಂಖ್ಯೆ 3, ಸಿಟಿಎಸ್ ಸಂಖ್ಯೆ 15/1, ಗ್ರಾಮ ಭಮುರ್ಡಾ, ವಕ್ಡೆವಾಡಿ, ಶಿವಾಜಿ ನಗರ, ಪುಣೆ ನಗರ, ಮಹಾರಾಷ್ಟ್ರ 411005

ಸ್ಥಿರ ಆಸ್ತಿಗಳ ಮಾರಾಟಕ್ಕೆ ಹರಾಜು ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6) ಮತ್ತು 9(1) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಹರಾಜು ಸೂಚನೆ. ಕೆಳಗೆ ವಿವರಿಸಿದ ಸ್ಥಿರ ಆಸ್ತಿ(ಗಳು) **ಅಲ್ಟಮ್ ಕ್ರೆಡೋ ಹೋಮ್ ಫೈನಾನ್ಸ್ ಪ್ರೈಲಿ.** ಗೆ ಇನ್ನು ಮುಂದೆ **ಎಸಿಹೆಚ್‌ಎಫ್‌ಎಲ್** ಎಂದು ಕರೆಯಲ್ಪಡುತ್ತದೆ, ಅಡಮಾನ ಇಡಲಾಗಿದೆ/ವಿಧಿಸಲ್ಪಟ್ಟಿದೆ ಎಂದು ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಕೆಳಗೆ ಸೂಚಿಸಲಾದ ಸಾಲಗಾರರು(ಗಳು) ಮತ್ತು ಖಾತರಿದಾರರು(ಗಳು) ಗೆ, ಸೂಚನೆ ನೀಡಲಾಗಿದೆ. ಇದರ ಸ್ವಾಧೀನವನ್ನು ಎಸಿಹೆಚ್‌ಎಫ್‌ಎಲ್ ನ ಅಧಿಕೃತ ಅಧಿಕಾರಿ ಮತ್ತು ಭದ್ರತಾ ಸಾಲಗಾರರು ತೆಗೆದುಕೊಂಡಿದ್ದಾರೆ, ಇದನ್ನು **10/11/2026 ರಂದು (ಮಂಗಳವಾರ) ಬೆಳಿಗ್ಗೆ 11:30 ರಿಂದ ಸಂಜೆ 4:30 ರ** ನಡುವೆ **"ಎಲ್ಲಿದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ"** ಮತ್ತು **"ಹೇಗಿದೆಯೋ ಹಾಗೆಯೇ"** ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ, ಕೆಳಗೆ ತಿಳಿಸಿದಂತೆ ಸಾಲಗಾರರು ಮತ್ತು ಖಾತರಿದಾರರಿಂದ ಎಸಿಹೆಚ್‌ಎಫ್‌ಎಲ್ ಗೆ ಬಾಕಿ ಇರುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳೊಂದಿಗೆ ಕೆಳಗೆ ತಿಳಿಸಿದ ಮೊತ್ತವನ್ನು ಮರುಪಡೆಯಲಾಗುತ್ತದೆ.

ಕ್ರ. ಸಂ.	ಸಾಲಗಾರರ/ಸಹ–ಸಾಲಗಾರರ ಮತ್ತು ಜಾಮೀನುದಾರರ ಹೆಸರು ಸಾಲದ ಖಾತೆ ಸಂಖ್ಯೆ	13(2)ರಡಿ ನೋಟಿಸ್ ಮೊತ್ತ ಮತ್ತು ದಿನಾಂಕ	ವಸೂಲಿ ಮಾಡಬೇಕಾದ ಬಾಕಿಗಳು (ಭದ್ರತಾ ಸಾಲ)	ಮೀಸಲು ಬೆಲೆ / ಠೇವಣಿ ಮಾಡಬೇಕಾದ ಮುಂಗಡ ಹಣ	ಟೆಂಡರ್ ತೆರೆಯುವ ದಿನಾಂಕ(ಗಳು) ಮತ್ತು ಸಮಯ	ಸ್ವಾಧೀನದ ವಿಧ
1	ಮಂಜುನಾಥ್ ಪಿ ಎಸ್ (ಸಾಲಗಾರ) ವಿನುತ ಎ ಟಿ (ಸಹ-ಸಾಲಗಾರ) ಖಾತೆ ಸಂಖ್ಯೆ 1172010300039	ರೂ. 18,13,725/- 11-ಜೂನ್-2024	ರೂ. 22,55,739.00/- ಎನ್.ಪಿ.ಎ ದಿನಾಂಕ: 03-ಮೇ-2026	ರೂ. 36,82,800/- ರೂ. 3,68,280/-	10-ನವೆಂಬರ್-2026 (ಶನಿವಾರ) (ರಾತ್ರಿ 11.00 ರಿಂದ ಸಂಜೆ 4.00 ರವರೆಗೆ)	ಸಾಂಕೇತಿಕ ಸ್ವಾಧೀನ
ಸುರಕ್ಷಿತ ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರ ಆಸ್ತಿ ಹೊಂದಿರುವ ಸೈಟ್ ಸಂಖ್ಯೆ 70, ಅಸೆಸ್ಮೆಂಟ್ ಸಂಖ್ಯೆ 55/5, ಲಕ್ಷ್ಮಿಪುರ ಗ್ರಾಮದಲ್ಲಿದೆ, ಪ್ರಸ್ತುತ ಸಿಎಂಸಿ ಮಿತಿಗಳು, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-562122, ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಅಳತೆ, ಎಲ್ಲಾ ಉಪಕರಣಗಳೊಂದಿಗೆ 600 ಚದರ ಅಡಿ ಅಳತೆ, ಮೇಲ್ಛಾವಣಿ ಕೆಳಗೆ ಅಥವಾ ಮೇಲೆ ಏನೇ ಇರಲಿ, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 20-0 (ಇಪ್ಪತ್ತು) ಅಡಿ, ಉತ್ತರದಿಂದ ದಕ್ಷಿಣಕ್ಕೆ: 30-0 (ಮೂವತ್ತು) ಅಡಿ, ಒಟ್ಟು 600 ಚದರ ಅಡಿ ಅಳತೆ. ಪೂರ್ವ: ಸೈಟ್ ಸಂಖ್ಯೆ 56 ಪಶ್ಚಿಮ: ಇತರ ಆಸ್ತಿ ದಕ್ಷಿಣ: ರಸ್ತೆ ಉತ್ತರ: ಇತರ ಆಸ್ತಿ						
2	ಮಂಜಪ್ಪ ಪಿ (ಸಾಲಗಾರ) ಶಕುಂತಲಾ (ಸಹ-ಸಾಲಗಾರ) ಖಾತೆ ಸಂಖ್ಯೆ 1192020100210	ರೂ. 1,75,193/- 7-ಏಪ್ರಿಲ್-2026	ರೂ. 2,09,904.00/- ಎನ್.ಪಿ.ಎ ದಿನಾಂಕ: 31-ಮಾರ್ಚ್-2026	ರೂ. 15,23,610/- ರೂ. 1,52,361/-	10-ನವೆಂಬರ್-2026 (ಶನಿವಾರ) (ರಾತ್ರಿ 11.00 ರಿಂದ ಸಂಜೆ 4.00 ರವರೆಗೆ)	ಸಾಂಕೇತಿಕ ಸ್ವಾಧೀನ
ಸುರಕ್ಷಿತ ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಮನೆ ಸಂಖ್ಯೆ 87, ಅಸೆಸ್ಮೆಂಟ್ ಸಂಖ್ಯೆ 5822/5822-87-160/5822, ಪಿಐಡಿ ಸಂಖ್ಯೆ 3-4-539-87, ಅಳತೆ 6.096 X 9.144018 ಮೀ. ಅಂದರೆ 55.7418 ಚದರ ಮೀ., ವೈ. ನಾಗಪ್ಪ ಆಶ್ರಯ ಬಡಾವಣೆ, ಜೆ ವಿಭಾಗ, ಹರಿಹರ ಪೂರ್ವ: ಮನೆ ಸಂಖ್ಯೆ 88 ಪಶ್ಚಿಮ: ಮನೆ ಸಂಖ್ಯೆ 86 ದಕ್ಷಿಣ: ಮನೆ ಸಂಖ್ಯೆ 118 ಉತ್ತರ: ರಸ್ತೆ						
3	ಎ.ಕೆ. ಬಸವರಾಜಪ್ಪ (ಸಾಲಗಾರ) ಎ ಕೆ ಗೀತಮ್ಮ (ಸಹ-ಸಾಲಗಾರ) ಖಾತೆ ಸಂಖ್ಯೆ 1192020100224	ರೂ. 6,05,971/- 7-ಏಪ್ರಿಲ್-2026	ರೂ. 6,97,008.00/- ಎನ್.ಪಿ.ಎ ದಿನಾಂಕ: 31-ಮಾರ್ಚ್-2026	ರೂ. 26,47,890/- ರೂ. 2,64,789/-	10-ನವೆಂಬರ್-2026 (ಶನಿವಾರ) (ರಾತ್ರಿ 11.00 ರಿಂದ ಸಂಜೆ 4.00 ರವರೆಗೆ)	ಸಾಂಕೇತಿಕ ಸ್ವಾಧೀನ
ಸುರಕ್ಷಿತ ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಆಸ್ತಿ ಸಂಖ್ಯೆ 219/23/2, ಇ ಸ್ವಾತು ಸಂಖ್ಯೆ 151200501800120007, ಅಳತೆ 9.14 X 15.24 ಮೀಟರ್ ಅಂದರೆ 139.35 ಚದರ ಮೀಟರ್, ಹೊಟ್ಯಪುರ ಗ್ರಾಮ, ರಾಂಪುರ ಗ್ರಾಮ ಪಂಚಾಯತಿ, ಹೊನ್ನಾಳ್ಳಿ ದಕ್ಷಿಣ, ಹೊನ್ನಾಳ್ಳಿ ಪೂರ್ವ: ಪಂಚಾಯಿತಿ ರಸ್ತೆ ಪಶ್ಚಿಮ: ಮಹದೇವಪ್ಪನವರ ತೋಟ ದಕ್ಷಿಣ: ಲಕ್ಷ್ಮಮ್ಮನ ಮನೆ ಉತ್ತರ: ಮಂಜಮ್ಮನ ಖಾಲಿ ಆಸ್ತಿ						
4	ವೆಂಕಟರವಣ ರಾಮಪ್ಪ (ಸಾಲಗಾರ) ಲಲಿತಾ ನಾರಾಯಣಸ್ವಾಮಿ (ಸಹ-ಸಾಲಗಾರರು) ಖಾತೆ ಸಂಖ್ಯೆ S117202000097	ರೂ. 7,98,109/- 8-ಮೇ-2026	ರೂ. 8,98,181.00/- ಎನ್.ಪಿ.ಎ ದಿನಾಂಕ: 1-ಮೇ-2026	ರೂ. 11,30,895/- ರೂ. 1,13,089.5/-	10-ನವೆಂಬರ್-2026 (ಶನಿವಾರ) (ರಾತ್ರಿ 11.00 ರಿಂದ ಸಂಜೆ 4.00 ರವರೆಗೆ)	ಸಾಂಕೇತಿಕ ಸ್ವಾಧೀನ
ಸುರಕ್ಷಿತ ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲೂಕು, ರಾಯಲ್ಪಾಡು ಹೋಬಳಿ, ಕೋಡಿಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಿಗುವಮೊರಂಪಲ್ಲಿ ಗ್ರಾಮದಲ್ಲಿರುವ, ಆಸ್ತಿ ಸಂಖ್ಯೆ 153 ಹಾಗೂ ಇ-ಖಾತಾ ಸಂಖ್ಯೆ 151901101000620010 ಹೊಂದಿರುವ ಸ್ಥಿರಾಸ್ತಿ; ಇದರ ಅಳತೆಗಳು ಪೂರ್ವ-ಪಶ್ಚಿಮವಾಗಿ 11.277600000000001 ಮೀಟರ್‌ಗಳು ಮತ್ತು ಉತ್ತರ-ದಕ್ಷಿಣವಾಗಿ 8.5344 ಮೀಟರ್‌ಗಳು (ಒಟ್ಟು ವಿಸ್ತೀರ್ಣ 96.25 ಚದರ ಮೀಟರ್‌ಗಳು). ಇದರ ಮೇರೆಗಳು: ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ - ವೆಂಕಟರಾವಣಪ್ಪನವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ - ರವನಮ್ಮನವರಿಗೆ ಸೇರಿದ ಆಸ್ತಿ, ಉತ್ತರಕ್ಕೆ - ರಸ್ತೆ.						
5	ವಿಷಕಂಠ ಪಿ (ಸಾಲಗಾರರು) ಮಹಾದೇವಿ ವಿ (ಸಹ-ಸಾಲಗಾರರು) ಖಾತೆ ಸಂಖ್ಯೆ S118202000196	ರೂ. 6,40,523/- 8-ಮೇ-2026	ರೂ. 6,81,491.00/- ಎನ್.ಪಿ.ಎ ದಿನಾಂಕ: 1-ಮೇ-2026	ರೂ. 17,70,097.00/- ರೂ. 1,77,009.75/-	10-ನವೆಂಬರ್-2026 (ಶನಿವಾರ) (ರಾತ್ರಿ 11.00 ರಿಂದ ಸಂಜೆ 4.00 ರವರೆಗೆ)	ಸಾಂಕೇತಿಕ ಸ್ವಾಧೀನ
ಸುರಕ್ಷಿತ ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಮೈಸೂರು ಜಿಲ್ಲೆ, ಮೈಸೂರು ತಾಲೂಕು, ಶೆಟ್ಟಿ ನಾಯಕನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿರುವ, ಪಿಐಡಿ ಸಂಖ್ಯೆ 152200428135020003 ಅನ್ನು ಹೊಂದಿರುವ ಹಾಗೂ ಆಸ್ತಿ ಸಂಖ್ಯೆ 298/1 ಮತ್ತು ನಿರ್ಧಾರಣಾ ಸಂಖ್ಯೆ 285/186/186/2 ರಲ್ಲಿ ಒಳಗೊಂಡಿರುವ 92.94 ಚದರ ಮೀಟರ್ ವಿಸ್ತೀರ್ಣದ ಆಸ್ತಿ. ಇದರ ಗಡಿಗಳು ಹೀಗಿವೆ: ಪೂರ್ವಕ್ಕೆ - ರಸ್ತೆ; ಪಶ್ಚಿಮಕ್ಕೆ - ಅಂಗನವಾಡಿ ಕಟ್ಟಡ ಮತ್ತು ಸಣ್ಣಯ್ಯನವರ ಪತ್ನಿ ಮಡಮ್ಮನವರ ಮನೆ; ದಕ್ಷಿಣಕ್ಕೆ - ಖಾಸಗಿ ಆಸ್ತಿ; ಉತ್ತರಕ್ಕೆ - ಖಾಸಗಿ ಆಸ್ತಿ.						
6	ಮೋಟೆಬೆನ್ನೂರು ನಾಗರಾಜ (ಸಾಲಗಾರ) ಮೋಟೆಬೆನ್ನೂರು ಶೃತಿ (ಸಹ-ಸಾಲಗಾರ) ಖಾತೆ ಸಂಖ್ಯೆ 1192020100256	ರೂ. 8,56,201/- 4-ಜೂನ್-2026	ರೂ. 9,48,358.00/- ಎನ್.ಪಿ.ಎ ದಿನಾಂಕ: 29-ಮೇ-2026	ರೂ. 20,54,592/- ರೂ. 2,05,459.2/-	10-ನವೆಂಬರ್-2026 (ಶನಿವಾರ) (ರಾತ್ರಿ 11.00 ರಿಂದ ಸಂಜೆ 4.00 ರವರೆಗೆ)	ಸಾಂಕೇತಿಕ ಸ್ವಾಧೀನ
ಸುರಕ್ಷಿತ ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಹರಪನಹಳ್ಳಿ ತಾಲೂಕಿನ ಹಲವಾಗಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವಾಗಲು ಗ್ರಾಮದಲ್ಲಿರುವ, 12.192 X 9.144 ಮೀಟರ್‌ಗಳಷ್ಟು ಅಳತೆ (ಒಟ್ಟು ವಿಸ್ತೀರ್ಣ 111.48 ಚದರ ಮೀಟರ್) ಹೊಂದಿರುವ ಆಸ್ತಿ ಸಂಖ್ಯೆ 2169/24 ಹಾಗೂ ಇ-ಸ್ವತ್ತು ಸಂಖ್ಯೆ 15 200401100120203. ಇದರ ಗಡಿಗಳು ಹೀಗಿವೆ: ಪೂರ್ವಕ್ಕೆ - ನಿವೇಶನ ಸಂಖ್ಯೆ 23, ಪಶ್ಚಿಮಕ್ಕೆ - ನಿವೇಶನ ಸಂಖ್ಯೆ 25, ದಕ್ಷಿಣಕ್ಕೆ - ರಸ್ತೆ ಉತ್ತರಕ್ಕೆ - ಗಡ್ಡಿಗ್ ರವಿಯಪ್ಪ ಅವರ ಮನೆ.						

ಮೇಲಿನ ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳು https://altumcredo.co.in/pdf-viewer.php?file=TERMS%20AND%20CONDITIONS%20FOR%20AUCTION.pdf ವೆಬ್‌ಸೈಟ್‌ನಲ್ಲಿ ಲಭ್ಯವಿದೆ ಮತ್ತು ಇದನ್ನು ಈ ಹರಾಜು ಪ್ರಕಟಣೆಯ ಭಾಗವಾಗಿ ಪರಿಗಣಿಸಬೇಕು.

ದಿನಾಂಕ: 03/10/2026 ಸ್ಥಳ: ಕರ್ನಾಟಕ

ಸಹಿ/– ಅಧಿಕೃತ ಅಧಿಕಾರಿ: ಅಲ್ಟಮ್ ಕ್ರೆಡೋ ಹೋಮ್ ಫೈನಾನ್ಸ್ ಪ್ರೈ. ಲಿಮಿಟೆಡ್

HOUSING FINANCE

ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

(ಹಿಂದೆ ಫಾಸ್ಟ್‌ಟ್ರ್ಯಾಕ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಸಿಐಎನ್ ಸಂಖ್ಯೆ: U65993MH2005PLC158168
ನೋಂದಾಯಿತ ಕಚೇರಿ: ಐಟಿಐ ಹೌಸ್, 36 ಡಾ. ಆರ್. ಕೆ. ಶಿರೋಡ್ಕರ್ ಮಾರ್ಗ, ಪರೇಲ್, ಮುಂಬೈ – 400 012
ಇ–ಮೇಲ್ ಐಡಿ: compliance@fasttrackhfc.com; ವೆಬ್‌ಸೈಟ್: www.itihousing.com

ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ) [ನಿಯಮ 8(1)]

ಕೆಳಸಹಿದಾರರು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ **ಮೆ. ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್** (ಹಿಂದೆ **ಫಾಸ್ಟ್‌ಟ್ರ್ಯಾಕ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್** ಎಂದು ಕರೆಯಲಾಗುತ್ತಿತ್ತು)ನ ಅಧಿಕೃತ ಅಧಿಕಾರಿಯಾಗಿರುತ್ತಾರೆ. ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮ 8 ರೊಂದಿಗೆ ಓದಲಾದ ಸೆಕ್ಷನ್ 13(2) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ನಿಯಮಗಳು 2002, ಕೆಳಗೆ ಉಲ್ಲೇಖಿಸಲಾದ ಡಿಮ್ಯಾಂಡ್ ನೋಟಿಸ್ ಅನ್ನು ನೀಡಲಾಗಿದೆ, ಸಾಲಗಾರರು ಈ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಸೂಚಿಸಲಾಗಿದೆ. ಸಾಲಗಾರನು ಮೊತ್ತವನ್ನು ಮರುಪಾವತಿಸಲು ವಿಫಲವಾದ ಕಾರಣ, ಸಾಲಗಾರ/ಖಾತರಿದಾರರು ಮತ್ತು ಸಾರ್ವಜನಿಕರಿಗೆ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಗೆ ಉಲ್ಲೇಖಿಸಲಾದ ದಿನಾಂಕದಂದು ಅವನಿಗೆ/ಅವಳಿಗೆ ನೀಡಲಾದ ಅಧಿಕಾರಗಳನ್ನು ಚಲಾಯಿಸಿ **ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆಂದು** ನೋಟಿಸ್ ನೀಡಲಾಗಿದೆ. ಸಾಲಗಾರರು/ಖಾತರಿದಾರರು, ವಿಶೇಷವಾಗಿ ಸಾರ್ವಜನಿಕರು ಈ ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು **ಮೆ. ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್** (ಹಿಂದೆ ಫಾಸ್ಟ್‌ಟ್ರ್ಯಾಕ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ನ ಶುಲ್ಕಕ್ಕೆ ಒಳಪಟ್ಟಿರುತ್ತದೆ.

ಕ್ರ. ಸಂ.	ಸಾಲಗಾರರ ಹೆಸರು	ಅಡಮಾನವಿಟ್ಟ ಆಸ್ತಿಯ ವಿವರ	ಡಿಮ್ಯಾಂಡ್ ನೋಟಿಸ್ ದಿನಾಂಕ & 13(2) ಮೊತ್ತ	ಸಾಂಕೇತಿಕ ಸ್ವಾಧೀನತೆ ದಿನಾಂಕ
1	1. **ಶಾರದಮ್ಮ** (ಸಾಲಗಾರ) & 2. **ಮಂಜುನಾಥ** (ಸಹ-ಸಾಲಗಾರ) **ಸಾಲದ ಖಾತೆ ಸಂಖ್ಯೆ: LLDV01624-250006079**	ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಮನೆ ಪಟ್ಟಿ/ಖಾತಾ ಸಂಖ್ಯೆ12/9, ಹಳೆಯ ಸಂಖ್ಯೆ21, ಇ-ಖಾತಾ ಪಿಐಡಿ ಸಂಖ್ಯೆ 152800200707300026 ಹೊಂದಿರುವ ಸ್ಥಿರ ಆಸ್ತಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ ಗೊಲ್ಲಹಳ್ಳಿ ಗ್ರಾಮ ಪಂಚಾಯತ್‌ನ ಕಸಬಾ ಹೋಬಳಿಯ ನಲ್ಲಗುಟ್ಟಪಾಳ್ಯ ಗ್ರಾಮದಲ್ಲಿದೆ, ಪೂರ್ವದಿಂದ ಪಶ್ಚಿಮಕ್ಕೆ 10.6680 ಮೀಟರ್ (35 ಅಡಿ) ಮತ್ತು ಉತ್ತರದಿಂದ ದಕ್ಷಿಣಕ್ಕೆ 9.144 ಮೀಟರ್ (30 ಅಡಿ), ಒಟ್ಟು 97.55 ಚದರ ಮೀಟರ್ (1050 ಚದರ ಅಡಿ) ಅಳತೆ ಮತ್ತು **ಗಡಿಗಳು:-** ಪೂರ್ವಕ್ಕೆ ಅಥವಾ ಕಡೆಗೆ:- ಗುರಪ್ಪ ಅವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ ಅಥವಾ ಕಡೆಗೆ:- ಸರ್ವೆ ಸಂಖ್ಯೆ ಆಸ್ತಿ, ದಕ್ಷಿಣಕ್ಕೆ ಅಥವಾ ಕಡೆಗೆ: ಯಶೋಧಮ್ಮ ಅವರಿಗೆ ಸೇರಿದ ಆಸ್ತಿ, ಉತ್ತರಕ್ಕೆ ಅಥವಾ ಕಡೆಗೆ: ಶಶಿಕುಮಾರ್ ಅವರಿಗೆ ಸೇರಿದ ಆಸ್ತಿ.	20/06/2025 & ರೂ. 7,07,712/-	29/09/2026

ದಿನಾಂಕ : 03.10.2026, ಸ್ಥಳ : ಕರ್ನಾಟಕ

ಸಹಿ/– ಅಧಿಕೃತ ಅಧಿಕಾರಿ, ಐಟಿಐ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ